

ಸುನಿತಾ ಜೊತೆ ಅನಿಲ್ ಕಪೂರ್

# ತಂದೆಯಾಗಿ ನಾನು ಅಷ್ಟಕ್ಕಷ್ಟೆ: ಅನಿಲ್

ಅನಿಲ್ ಕಪೂರ್ ನಿಂತಲ್ಲೇ ವಯಸ್ಸು ನಿಂತುಬಿಟ್ಟದೆಯೇನೋ ಎನ್ನುವವರ ಪೈಕಿ. ದೈಹಿಕವಾಗಿಯೂ ಅವರು ಸಮರ್ಥ. ವ್ಯಾಯಾಮ ತಪ್ಪಿಸುವುದಿಲ್ಲ. ಈಗಲೂ ಚಿತ್ರೀಕರಣದಲ್ಲಿ ನಿರತ. ಇಂತಿಪ್ಪ ಅವರಿಗೆ ಕನ್ನಡಿಯೆಂದರೆ ಬಲು ಮೋಹ. ಕನ್ನಡಿ ಕಂಡೊಡನೆ ಅದರ ಎದುರು ನಿಂತು, ಹಲವು ಭಂಗಿಗಳಲ್ಲಿ ತಮ್ಮನ್ನು ತಾವೇ ನೋಡಿಕೊಂಡು ಸುಖಿಸುತ್ತಾರೆ. ಇದನ್ನೇ ಈ ಕಾಲದವರು ಸ್ವ–ಪ್ರೇಮ ಎಂದು ಹ್ಯಾಷ್‌ಟ್ಯಾಗ್ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ ಬಿಂಬಿಸಿಕೊಳ್ಳುವುದುಂಟು.

ಹೀಗಿರುವ ಅನಿಲ್ ಇತ್ತೀಚೆಗೆ ಪಾಡ್ಕಾಸ್ಟ್ ಒಂದರಲ್ಲಿ ತಂದೆಯಾಗಿ ತಾವು ಹೇಗೆ ಎನ್ನುವ ಕುರಿತು ಆತ್ಮವಿಮರ್ಶೆ ಮಾಡಿಕೊಂಡು ಮಾತನಾಡಿದ್ದನ್ನು ಅನೇಕರು ಮೆಚ್ಚಿಕೊಂಡರು. ಆ ಪಾಡ್ಕಾಸ್ಟ್‌ನಲ್ಲಿ ಅವರಾಡಿದ ಮಾತು ಒಂದು ಬಗೆಯಲ್ಲಿ ತಪ್ಪೊಪ್ಪಿಗೆಯಂತೆಯೂ ಇತ್ತು.

ವಸ್ತ್ರವಿನ್ಯಾಸಕಿ ಸುನಿತಾ ಕಪೂರ್ ಅವರನ್ನು ಅನಿಲ್ ಮದುವೆಯಾದದ್ದು 1984ರಲ್ಲಿ. ಅವರಿಗೆ ಮೂವರು ಮಕ್ಕಳು–ಸೋನಂ, ರಿಯಾ ಹಾಗೂ ಹರ್ಷವರ್ಧನ್. ಸೋನಂ ನಟಿಯಾಗಿ ಮೊದಲು ಅಪ್ಪನ ಹೆಜ್ಜೆಗಳ ಮೇಲೆಯೇ ಹೆಜ್ಜೆ ಇಟ್ಟವರು. ಆಮೇಲೆ ಹರ್ಷವರ್ಧನ್ ಕೂಡ ಅಭಿನಯ ಲೋಕ ಪ್ರವೇಶಿಸಿದರಾದರೂ ತಂದೆಯಷ್ಟು ಜನಪ್ರಿಯ ಆಗಲು ಆಗಲಿಲ್ಲ. ರಿಯಾ ಬಣ್ಣ ಹಚ್ಚಲಿಲ್ಲವಾದರೂ ನಿರ್ಮಾಪಕಿಯಾಗಿ ಚಿತ್ರರಂಗದೊಟ್ಟಿಗೆ ನಂಟು ಬೆಸೆದುಕೊಂಡರು.

ಈ ಮಕ್ಕಳು ಚಿಕ್ಕವರಾಗಿದ್ದಾಗ ಅನಿಲ್ ಬಹುತೇಕ ಸಮಯ ಚಿತ್ರೀಕರಣದಲ್ಲಿಯೇ ತೊಡಗಿರುತ್ತಿದ್ದರು. ಮಕ್ಕಳೊಂದಿಗೆ ಹೆಚ್ಚು ಕಾಲ ಕಳೆಯಲು ಆಗುತ್ತಲೇ ಇರಲಿಲ್ಲ. ತಮ್ಮದೇ ಬಣ್ಣದಲೋಕದಲ್ಲಿ ವಿಹರಿಸುತ್ತಿದ್ದ ಅವರಿಗೆ ಮಕ್ಕಳು ಯಾವ ತರಗತಿಯಲ್ಲಿ ಓದುತ್ತಿದ್ದಾರೆ ಎಂಬ ಅರಿವೂ ಇರುತ್ತಿರಲಿಲ್ಲ. 'ಅಪ್ಪ, ನನ್ನ ಹುಟ್ಟುಹಬ್ಬ ಯಾವತ್ತು ಹೇಳು' ಎಂಬ ಪ್ರಶ್ನೆ ಮಗುವಿನ ಬಾಯಿಂದ ಬಂದಾಗಲೂ ಅವರು ನಿರುತ್ತರರಾದ ದಿನಗಳು ಹಲವು ಇವೆ. ಆಗೆಲ್ಲ ಅವರಿಗೆ ಸುನಿತಾ ನೆರವಿಗೆ ಬರುತ್ತಿದ್ದರು. ಮಕ್ಕಳ ಹುಟ್ಟಿದ ದಿನವನ್ನು ನೆನಪಿಸಿ, ಆಚರಣೆ ಸಂದರ್ಭ ಪುರುಸೊತ್ತು ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು.

'ಸುನಿತಾ ಒಂದು ಬಗೆಯಲ್ಲಿ ಒಂಟಿ ಪೋಷಕಿ. ನಾನು ತಂದೆಯಾಗಿ ಮಕ್ಕಳಿಗೆ ಇನ್ನಷ್ಟು ಸಮಯ ಕೊಡಬೇಕಿತ್ತು ಎಂದು ಈಗ ಅನಿಸುತ್ತದೆ. ಆದರೆ, ಆಗ ನನ್ನದೇ ಅಭಿನಯಲೋಕದಲ್ಲಿ ಪೂರ್ಣವಾಗಿ ಮುಳುಗಿಬಿಟ್ಟೆ. ಮಕ್ಕಳು ತಮ್ಮದೇ ಆದ ಹಾದಿಯಲ್ಲಿ ಬೆಳೆಯುತ್ತಾ ಹೋದದ್ದನ್ನು ನೋಡಿ ನಾನು ಸಂಭ್ರಮಪಟ್ಟೆ. ಈಗ ಅವರೆಲ್ಲ ಎಷ್ಟೆಲ್ಲ ದೊಡ್ಡವರಾಗಿದ್ದಾರೆ ಎನ್ನುವುದನ್ನು ನೋಡಿದರೆ ಖುಷಿಯಾಗುತ್ತದೆ' ಎಂಬ ಅನಿಲ್ ಮಾತು ಎಷ್ಟೋ ತಂದೆಯರ ಮಾತೂ ಹೌದು. ■

# ಸುಬ್ಬುಲಕ್ಷ್ಮಿ ಪಾತ್ರಕ್ಕೆ ರುಕ್ಮಿಣಿ?

ಕರ್ನಾಟಕ ಶಾಸ್ತ್ರೀಯ ಸಂಗೀತದಿಂದ ಮನೆಮಾತಾಗಿರುವ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಜೀವನಗಾಥೆಯ ಸಿನಿಮಾ ಮಾಡಲು ಪೂರ್ವತಯಾರಿಗಳು ನಡೆಯುತ್ತಿವೆ.

ಸುಬ್ಬುಲಕ್ಷ್ಮಿ ಅವರ ಪಾತ್ರದಲ್ಲಿ ಸಾಯಿ ಪಲ್ಲವಿ ನಟಿಸಲಿದ್ದಾರೆ ಎಂದು ಈ ಮೊದಲು ಸುದ್ದಿಯಾಗಿತ್ತು. ಕರ್ನಾಟಕ ಶಾಸ್ತ್ರೀಯ ಸಂಗೀತದ ಸೂಕ್ಷ್ಮಗಳನ್ನು ಅದಕ್ಕಾಗಿಯೇ ಸಾಯಿ ಪಲ್ಲವಿ ಅಭ್ಯಾಸ ಮಾಡಲು ಮುಂದಾಗಿದ್ದಾರೆ ಎನ್ನಲಾಗಿತ್ತು. ಈಗ ಆ ಪಾತ್ರಕ್ಕೆ ಕನ್ನಡದ ನಟಿ ರುಕ್ಮಿಣಿ ವಸಂತ ಅವರನ್ನು ಬದಲಿಸಲು ನಿರ್ದೇಶಕರು ಮುಂದಾಗಿದ್ದಾರೆ ಎಂಬ ಸುದ್ದಿ ಬಂದಿದೆ.

ರುಕ್ಮಿಣಿ ಈ ಪಾತ್ರಕ್ಕೆ ಒಪ್ಪಿದ್ದಾರೋ ಇಲ್ಲವೋ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಸಾಯಿ ಪಲ್ಲವಿ ಯಾಕೆ ಈ ಯೋಜನೆಯಿಂದ ಹೊರಗೆ ಉಳಿಯಲು ಬಯಸಿದರು ಎನ್ನುವುದೂ ಗೊತ್ತಾಗಿಲ್ಲ. ಇಬ್ಬರೂ ನಟಿಯರು ಖುದ್ದು ಈ ವಿಷಯವಾಗಿ ಏನೊಂದನ್ನೂ ಹೇಳಿಲ್ಲ. ನಿರ್ದೇಶಕ ಗೌತಮ್ ತಿನ್ನೌರಿ ಅವರು ಚಿತ್ರಕಥೆ ಸಿದ್ಧಪಡಿಸಿದ್ದು, ಕೆಲವೇ ತಿಂಗಳಲ್ಲಿ ಚಿತ್ರೀಕರಣ ಪ್ರಾರಂಭಿಸಲಿದ್ದಾರೆ.



ಸಾಯಿ ಪಲ್ಲವಿ

ಸಾಯಿ ಪಲ್ಲವಿ ಅವರ ಕೈಲಿ ಕೆಲವು ಚಿತ್ರಗಳಿವೆ. 'ರಾಮಾಯಣ' ಸಿನಿಮಾದಲ್ಲಿ ಸೀತೆ ಪಾತ್ರಧಾರಿಯಾದ ಅವರು, 'ಕಲ್ಕಿ 2898 ಎ.ಡಿ' ಚಿತ್ರದ ಎರಡನೇ ಭಾಗದಲ್ಲಿ ದೀಪಿಕಾ ಪಾತ್ರವನ್ನು ನಿರ್ವಹಿಸಲು ಒಪ್ಪಿದ್ದಾರೆ ಎಂಬ ವರ್ತಮಾನವಿದೆ. 'ಏಕ್ ದಿನ್' ಹಿಂದಿ ಚಿತ್ರವು ಈಗಷ್ಟೇ ಬಿಡುಗಡೆಯಾಗಿದ್ದು, ಸಾಯಿ ಪಲ್ಲವಿ ಅವರ ಅಭಿನಯದ ಬಗ್ಗೆ ಶ್ಲಾಘನೆ ವ್ಯಕ್ತವಾಗಿದೆ. ಅವರು ನಟಿಸಿರುವ ಮೊದಲ ಹಿಂದಿ ಸಿನಿಮಾ ಇದು.



ರುಕ್ಮಿಣಿ ವಸಂತ

ರುಕ್ಮಿಣಿ ವಸಂತ ಅಭಿನಯದ ಬಹು ನಿರೀಕ್ಷಿತ 'ಟಾಕ್ಸಿಕ್' ಕನ್ನಡ ಸಿನಿಮಾ ಜೂನ್‌ನಲ್ಲಿ ತೆರೆಕಾಣಬೇಕಿದೆ. ಜೂನಿಯರ್ ಎನ್‌ಟಿಆರ್ ನಾಯಕರಾಗಿರುವ 'ಡ್ರ್ಯಾಗನ್' ಸಿನಿಮಾದಲ್ಲೂ ಮುಖ್ಯಪಾತ್ರದಲ್ಲಿ ಅವರು ನಟಿಸಿದ್ದಾರೆ. ■